ಸುದ್ದಿ ಸಿಂಚನ

18, 19ರಂದು ವರಸಿದ್ಧಿ ಗಣಪತಿ ದೇವರ ಪುನರ್ ಅಷ್ಟಬಂಧ ಕಾರ್ಯಕ್ರಮ

ಹೊನ್ನಾವರ: ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಅಳ್ಳಂಕಿಯ ಶ್ರೀ ವರಸಿದ್ಧಿ ಗಣಪತಿ ದೇವರ ಪುನರ್ ಅಷ್ಟಬಂಧ ಮತ್ತು ಪೂರ್ಣ ಕಲಾವೃದ್ಧಿ ತಾಂತ್ರಿಕ ಮಹೋತ್ಸವ ಕಾರ್ಯಕ್ರಮವು ಏ. 18 ಮತ್ತು 19ರಂದು ಆಗಮೋಕ್ತ ವೇ.ಮೂ. ಕಟ್ಟೆ ಶಂಕರ ಭಟ್ಟರ ಆಚಾರ್ಯತ್ವದಲ್ಲಿ ಜರುಗಲಿದೆ. 18ರಂದು ದೇವತಾ ಪ್ರಾರ್ಥನೆಯೊಂದಿಗೆ ಬಂಧ ಶಿಥಿಲ ಪ್ರಾಯಶ್ಚಿತ್ತ ಸಹಿತ ಆಗಮೋಕ್ತ ವಿಧಿಗಳೊಂದಿಗೆ ಪುನರಾಷ್ಟಬಂಧ ಮತ್ತು ದಂಡಬಲಿ ಉತ್ಸವ ನಡೆಯಲಿದ್ದು, 19ರ ಮಧ್ಯಾಹ್ನ ಶಕ್ತಿಹೋಮ, ಪೂರ್ಣ ಕಲಾವೃದ್ಧಿ, ಅಥರ್ವಶೀರ್ಷ ಮೋದಕ ಹವನ ಮತ್ತು ಸಾಮೂಹಿಕ ಸತ್ಯನಾರಾಯಣ ವ್ರತ ಪೂಜೆ, ಮಹಾ ಅನ್ನಸಂತರ್ಪಣೆ ಜರುಗಲಿದೆ. ಅಂದು ಸಂಜೆ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಸಂಜೆ 9 ಘಂಟೆಗೆ ಜಿಲ್ಲೆಯ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಜಿಪಂ ಮಾಜಿ ಅಧ್ಯಕ್ಷ ಆರ್. ಎಸ್. ರಾಯ್ಕರ ಮತ್ತು ಗ್ರಾಮ ಸುಧಾರಕಾ ಸಮಿತಿಯ ಅಧ್ಯಕ್ಷ ಚಂದ್ರಕಾಂತ ಕೊಚರೇಕರ ಉಪಸ್ಥಿತಿಯಲ್ಲಿ ಅಳ್ಳಂಕಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರೂ ಆಗಿರುವ, ಕವಿ ಡಾ. ಜಿ.ಎಸ್. ಹೆಗಡೆಯವರಿಗೆ ನಾಗರಿಕ ಸನ್ಮಾನ ನೀಡಿ ಗೌರವಿಸಲಾಗುತ್ತಿದೆ. ನಂತರ ಶ್ರೀ ಮುರ್ಕುಂಡೇಶ್ವರ ನಾಟ್ಯ ವೃಂದದವರಿಂದ ಚಿನ್ನದ ಗೊಂಬೆ ಎಂಬ ಸುಂದರ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಚಂದ್ರಕಾಂತ ಕೊಚರೇಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

- ಕವಿ ಡಾ. ಜಿ.ಎಸ್. ಹೆಗಡೆಯವರಿಗೆ ನಾಗರಿಕ ಸನ್ಮಾನ ನೀಡಿ ಗೌರವ
- ಬಳಿಕ ಶ್ರೀ ಮುರ್ಕುಂಡೇಶ್ವರ ನಾಟ್ಯ ವೃಂದದವರಿಂದ ಚಿನ್ನದ ಗೊಂಬೆ ಎಂಬ ಸುಂದರ ಸಾಮಾಜಿಕ ನಾಟಕ ಪ್ರದರ್ಶನ

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆ: 19 ರಂದು ಮತದಾನ

ಸಿದ್ದಾಪುರ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 2026-2031ನೇ ಸಾಲಿನ ಪಂಚ ವಾರ್ಷಿಕ ಅವಧಿಯ ಚುನಾವಣಾ ಪ್ರಕ್ರಿಯೆಗಳು ಆರಂಭಗೊಂಡಿದ್ದು, ಏ. 19 ರಂದು ಮತದಾನ ನಡೆಯಲಿದೆ. ಸಂಘದ ಸದಸ್ಯರು ಮಾರ್ಚ್ ತಿಂಗಳ ವಾರ್ಷಿಕ ಪರೀಕ್ಷೆ ಹಾಗೂ ಏಪ್ರಿಲ್‌ನಲ್ಲಿ ಜನಗಣತಿ ಕಾರ್ಯಗಳಲ್ಲಿ ತೊಡಗಿಕೊಳ್ಳುವುದರಿಂದ ಮತ್ತು ಉಪಚುನಾವಣೆಗಳ ಹಿನ್ನೆಲೆ ಕಾಲಾವಕಾಶದ ಸಮಾಲೋಚನೆ ನಡೆಸಲಾಗುತ್ತಿತ್ತು. ಧಾರವಾಡದ ಉಚ್ಚ ನ್ಯಾಯಾಲಯದ ಪೀಠದ ಆದೇಶದಂತೆ ಚುನಾವಣಾ ಪ್ರಕ್ರಿಯೆಯನ್ನು 1 ತಿಂಗಳೊಳಗೆ ಮುಕ್ತಾಯಗೊಳಿಸಬೇಕಿರುವುದರಿಂದ ಏ. 1ರಿಂದಲೇ ಚುನಾವಣಾ ನೀತಿ ಸಂಹಿತೆ ಜಾರಿಗೆ ತರಲಾಗಿದೆ. ಚುನಾವಣಾ ವೇಳಾಪಟ್ಟಿಯಂತೆ, ತಾಲೂಕು ಮಟ್ಟದ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗಾಗಿ ಏ. 11 ಮತ್ತು 12 ರಂದು ಬೆಳಗ್ಗೆ 11 ರಿಂದ ಸಂಜೆ 6 ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ನೀಡಲಾಗಿತ್ತು. ಏ. 13 ರಂದು ನಾಮಪತ್ರಗಳ ಪರಿಶೀಲನೆ ನಡೆದಿದ್ದು ಏ. 14ರಂದು ಉಮೇದುವಾರಿಕೆ ಹಿಂಪಡೆಯಲು ಕೊನೆಯ ದಿನವಾಗಿದೆ. ಏ. 19ರಂದು ಬೆಳಗ್ಗೆ 8.30ರಿಂದ ಸಂಜೆ 4.30ರವರೆಗೆ ಮತದಾನ ಪ್ರಕ್ರಿಯೆ ನಡೆದು, ಅಂದೇ ಫಲಿತಾಂಶ ಪ್ರಕಟವಾಗಲಿದೆ. ಚುನಾವಣಾ ಪಾವಿತ್ರ್ಯತೆ ಕಾಯ್ದುಕೊಳ್ಳಲು ಸಂಘವು ಶೂನ್ಯ ಸಹಿಷ್ಣುತೆ ನೀತಿಯನ್ನು ಅಳವಡಿಸಿಕೊಂಡಿದ್ದು, ಸಂಘದ ಸದಸ್ಯರಲ್ಲದವರ ಪ್ರವೇಶವನ್ನು ಚುನಾವಣಾ ಕಚೇರಿಯಲ್ಲಿ ನಿಷೇಧಿಸಲಾಗಿದೆ. ಚುನಾವಣಾ ಅಕ್ರಮ ತಡೆಯಲು ವಿಡಿಯೋ ಚಿತ್ರೀಕರಣದ ವ್ಯವಸ್ಥೆ ಮಾಡಲಾಗಿದ್ದು, ಸುಳ್ಳು ದೂರು ನೀಡುವ ಅಥವಾ ಶಾಂತಿ ಭಂಗ ಉಂಟುಮಾಡುವವರ ವಿರುದ್ಧ ಕ್ರಿಮಿನಲ್ ಕ್ರಮ ಕೈಗೊಳ್ಳಲಾಗುವುದು ಎಂದು ಸಂಘ ಎಚ್ಚರಿಸಿದೆ. ನೀತಿ ಸಂಹಿತೆ ಉಲ್ಲಂಘಿಸುವ ಅಭ್ಯರ್ಥಿಗಳ ಸ್ಪರ್ಧೆಯನ್ನು ತಕ್ಷಣವೇ ರದ್ದುಪಡಿಸುವುದಲ್ಲದೆ, ಭವಿಷ್ಯದ ಚುನಾವಣೆಗಳಿಂದ ಕಟ್ಟುನಿಟ್ಟಿನ ನಿಷೇಧ ಹೇರಲು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

- ಏ. 1ರಿಂದಲೇ ಚುನಾವಣಾ ನೀತಿ ಸಂಹಿತೆ ಜಾರಿಗೆ ತರಲಾಗಿದೆ.
- ಏ. 19ರಂದು ಬೆಳಗ್ಗೆ 8.30ರಿಂದ ಸಂಜೆ 4.30ರವರೆಗೆ ಮತದಾನ ಪ್ರಕ್ರಿಯೆ ನಡೆದು, ಅಂದೇ ಫಲಿತಾಂಶ ಪ್ರಕಟವಾಗಲಿದೆ.

ಜಿಲ್ಲೆಯಲ್ಲಿ ತಳಮಟ್ಟದಿಂದ ಜೆಡಿಎಸ್ ಸಂಘಟನೆ: ಸೂರಜ್ ನಾಯ್ಕ ಸೋನಿ

ಎನ್‌ಡಿಎ ಮೈತ್ರಿಕೂಟ ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುವಂತೆ ಶ್ರಮಿಸಲು ಕರೆ

ಭಟ್ಕಳದಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಸೂರಜ್ ಸೋನಿ ಮಾತನಾಡಿದರು.

- ಭಟ್ಕಳದಲ್ಲಿ ಜೆಡಿಎಸ್ ಪಕ್ಷದ ಸಂಘಟನೆಗೆ ಉತ್ತಮ ಬೆಂಬಲ ದೊರಕಿದೆ.
- ಈ ಹಿಂದೆ ಪಕ್ಷದಲ್ಲಿದಂತಹ ಅಲ್ಪಸಂಖ್ಯಾತ ಮುಖಂಡರು ಈಗ ಪಕ್ಷ ಬಲವರ್ಧನೆಗೆ ನಮ್ಮ ಜೊತೆ ಕೈಜೋಡಿಸಿದ್ದಾರೆ.
- ಮುಂದಿನ ದಿನಗಳಲ್ಲಿ ಭಟ್ಕಳದಲ್ಲಿ ಜೆಡಿಎಸ್ ಪಕ್ಷದ ನೂತನ ಪದಾಧಿಕಾರಿಗಳ ಸಮಿತಿ ರಚಿಸಿ ಪಕ್ಷಕ್ಕೆ ಬಲ ತುಂಬುವ ಕೆಲಸ ಮಾಡುತ್ತೇನೆ

• ಕನ್ನಡಪ್ರಭ ವಾರ್ತೆ ಭಟ್ಕಳ

ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷವನ್ನು ತಳಮಟ್ಟದಿಂದ ಬಲಪಡಿಸಲಾಗುವುದು. ಕೇಂದ್ರ ಸಚಿವ ಮತ್ತು ಜೆಡಿಎಸ್ ವರಿಷ್ಠರಾದ ಕುಮಾರಸ್ವಾಮಿಯವರು ಪಕ್ಷದ ಜಿಲ್ಲೆಯ ಜವಾಬ್ದಾರಿ ನನಗೆ ನೀಡಿದ್ದು, ಪಕ್ಷದ ವರಿಷ್ಠರು ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲಾಗುವುದು ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಸೂರಜ್ ನಾಯ್ಕ ಸೋನಿ ಹೇಳಿದರು.

ಸೋಮವಾರ ಪಟ್ಟಣದಲ್ಲಿ ಕಾರ್ಯಕರ್ತರ ಸಭೆ ನಡೆಸಿ ನಂತರ ಸುದ್ದಿಗಾರರ ಜೊತೆ ಮಾತನಾಡಿದರು. ಕೇಂದ್ರದ ಎನ್‌ಡಿಎ ಪಕ್ಷದ ಜೊತೆ ಜೆಡಿಎಸ್ ಪಕ್ಷ ಮೈತ್ರಿ ಸಾಧಿಸಿದ ಬಳಿಕ ಪ್ರಧಾನಿ ನರೇಂದ್ರ ಮೋದಿಯವರು ಕುಮಾರ ಸ್ವಾಮಿ ಅವರಿಗೆ ಕೇಂದ್ರ ಸಚಿವ ಸ್ಥಾನ ನೀಡಿದ್ದಾರೆ. ರಾಜ್ಯದಲ್ಲಿರುವ ಭ್ರಷ್ಟ ಕಾಂಗ್ರೆಸ್ ಸರಕಾರ ಕಿತ್ತೊಗೆಯಲು ಮುಂಬರುವ ಚುನಾವಣೆಗಳಲ್ಲಿ ನಾವು ಜೆಡಿಎಸ್ ಗೆಲ್ಲಿಸುವುದರ ಜೊತೆಗೆ ಎನ್.ಡಿ.ಎ ಮೈತ್ರಿಕೂಟ ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುವಂತೆ ಶ್ರಮಿಸಬೇಕು ಎಂದರು.

ಎನ್.ಡಿ.ಎ ಮೈತ್ರಿಕೂಟದಲ್ಲಿ ನಮ್ಮ ಪಕ್ಷದ ಕುಮಾರಸ್ವಾಮಿಯವರು ಮತ್ತೆ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಬೇಕು ಎನ್ನುವ ಆಶಯದೊಂದಿಗೆ ಪಕ್ಷಸಂಘಟನೆಗೆ ಮುಂದಾಗಿರುವುದಾಗಿ ತಿಳಿಸಿದರು.

ಭಟ್ಕಳದಲ್ಲಿ ಜೆಡಿಎಸ್ ಪಕ್ಷದ ಸಂಘಟನೆಗೆ ಉತ್ತಮ ಬೆಂಬಲ ದೊರಕಿದೆ. ಈ ಹಿಂದೆ ಪಕ್ಷದಲ್ಲಿದಂತಹ ಅಲ್ಪಸಂಖ್ಯಾತ ಮುಖಂಡರು ಈಗ ಪಕ್ಷ ಬಲವರ್ಧನೆಗೆ ನಮ್ಮ ಜೊತೆ ಕೈಜೋಡಿಸಿದ್ದಾರೆ. ಮುಂದಿನ ದಿನಗಳಲ್ಲಿ ಭಟ್ಕಳದಲ್ಲಿ ಜೆಡಿಎಸ್ ಪಕ್ಷದ ನೂತನ ಪದಾಧಿಕಾರಿಗಳ ಸಮಿತಿ ರಚಿಸಿ ಪಕ್ಷಕ್ಕೆ ಬಲ ತುಂಬುವ ಕೆಲಸ ಮಾಡುತ್ತೇನೆ ಎಂದರು. ಪಕ್ಷದ ಪ್ರಮುಖರಾದ ಪಿ.ಟಿ. ನಾಯ್ಕ, ದತ್ತಾತ್ರೆಯ ಪಟಗಾರ, ಈಶ್ವರ ನಾಯ್ಕ, ಕೃಷ್ಣಾನಂದ ಪೈ, ರಾಜವರ್ಧನ ನಾಯ್ಕ, ಬಾಬು ಗೌಡ, ಶಂಕರ ನಾಯ್ಕ, ಜೈನುಲಾದ್ದೀನ್ ಮುಂತಾದವರಿದ್ದರು.

ಶೆಜ್ಜೇಶ್ವರ ನೂತನ ಶಿಲಾಮಯ ದೇವಾಲಯದ ಭೂಮಿ ಪೂಜೆ

- ಈ ವಿಶ್ವ ವು ಎಷ್ಟು ವಿಸ್ತಾರವಾಗಿದೆ ಎಂದರೆ ಮಾನವ ನ ಬುದ್ಧಿಗೆ ಅದನ್ನು ಗ್ರಹಿಸಲು ಸಾಧ್ಯವಿಲ್ಲ.
- ವಿಜ್ಞಾನದ ವೇಗಕ್ಕಿಂತಲೂ ಮೀರಿದ ಶಕ್ತಿ ಪರಮಾತ್ಮನದು.

• ಕನ್ನಡಪ್ರಭ ವಾರ್ತೆ ಕಾರವಾರ

ತಾಲೂಕಿನ ಐತಿಹಾಸಿಕ ಹಾಗೂ ಪುರಾಣ ಪ್ರಸಿದ್ಧ ಶ್ರೀಕ್ಷೇತ್ರ ಶೇಜವಾಡದ ಮಹತೋಭಾರ ಶ್ರೀ ಶೆಜ್ಜೇಶ್ವರ ನೂತನ ಶಿಲಾಮಯ ದೇವಾಲಯದ ಭೂಮಿ ಪೂಜೆಹಾಗೂ ಶಿಲಾನ್ಯಾಸಕಾರ್ಯಕ್ರಮವು ಸೋಮವಾರ ಅತ್ಯಂತ ವೈಭವದಿಂದ ನೆರವೇರಿತು. ಶೃಂಗೇರಿ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳ ಅಮೃತ ಹಸ್ತದಿಂದ ಈ ಪುಣ್ಯ ಕಾರ್ಯಕ್ಕೆ ಚಾಲನೆ ದೊರೆಯಿತು.

ಗೋಕರ್ಣದ ಪ್ರಸಿದ್ಧ ತಂತ್ರಿಗಳಾದ ಗಜಾನನ ಭಟ್ಟ ಹಿರೇ ಮತ್ತು ಗಣಪತಿ ಭಟ್ಟ ಹಿರೇ ಅವರ ಪೌರೋಹಿತ್ಯದಲ್ಲಿ ಬೆಳಗ್ಗೆಯಿಂದಲೇ ವಿವಿಧ ವೈದಿಕ ಕಾರ್ಯಕ್ರಮಗಳು ಜರುಗಿದವು. ಗಣಪತಿ ಹೋಮ, ಬ್ರಹ್ಮಕೂರ್ಚ ಹೋಮ ಹಾಗೂ ಶ್ರೀ ದೇವರಿಗೆ ಭಕ್ತಿಯಿಂದ ರುದ್ರಾಭಿಷೇಕ ನೆರವೇರಿಸಲಾಯಿತು. ಮಧ್ಯಾಹ್ನ 11.50ರ ಶುಭ ಮುಹೂರ್ತದಲ್ಲಿ ಜಗದ್ಗುರುಗಳು ಶಿಲಾನ್ಯಾಸ ನೆರವೇರಿಸುವ ಮೂಲಕ ನೂತನ ದೇವಾಲಯದ ನಿರ್ಮಾಣಕ್ಕೆ ಅಡಿಪಾಯ ಹಾಕಿದರು.

ಶಿಲಾನ್ಯಾಸದ ನಂತರ ಆಶೀರ್ವಚನ ನೀಡಿದ ಶ್ರೀ ವಿಧುಶೇಖರ ಭಾರತೀ ಶ್ರೀಗಳು, ವಿಶ್ವದ ಆಗಾಧತೆ ಮತ್ತು ಭಗವಂತನ ಶಕ್ತಿಯ ಕುರಿತು ಮಾತನಾಡಿದರು. ಈ ವಿಶ್ವ ವು ಎಷ್ಟು ವಿಸ್ತಾರವಾಗಿದೆ ಎಂದರೆ ಮಾನವನ ಬುದ್ಧಿಗೆ ಅದನ್ನು ಗ್ರಹಿಸಲು ಸಾಧ್ಯವಿಲ್ಲ. ವಿಜ್ಞಾನದ ವೇಗಕ್ಕಿಂತಲೂ ಮೀರಿದ ಶಕ್ತಿ ಪರಮಾತ್ಮನದು. ವೇದ-ಉಪನಿಷತ್ತುಗಳು ಸಾರಿದಂತೆ, ನಮಗೆ ಕಾಣುವ ಈ ಬೃಹತ್ ಜಗತ್ತು ಪರಮಾತ್ಮನ ಒಂದು ಸಣ್ಣ ಅಂಶವಷ್ಟೇ ಎಂದು ಅವರು ವಿವರಿಸಿದರು.

ಸನಾತನ ಧರ್ಮದ ಮುಖ್ಯ ಸಾರಾಂಶಗಳಾದ ಭಗವದ ಆರಾಧನೆ ಮತ್ತು ಪರೋಪಕಾರ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಜ್ಜನರಾಗಿ ಬಾಳುತ್ತಾ ಇತರರಿಗೆ ಒಳಿತನ್ನು ಮಾಡಿದಾಗ ಮಾತ್ರ ಮಾನವ ಜನ್ಮ ಸಾರ್ಥಕವಾಗುತ್ತದೆ ಎಂದು ಕರೆ ನೀಡಿದರು.

ಹಳೆಯ ಪುರಾತನ ಕ್ಷೇತ್ರಗಳ ಪವಿತ್ರತೆಯನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ಕೇವಲ ಹೊಸ ದೇವಸ್ಥಾನ ಕಟ್ಟುವುದಷ್ಟೇ ಅಲ್ಲದೆ, ಪ್ರಾಚೀನ ದೇವಸ್ಥಾನಗಳಲ್ಲಿ ಶಾಸ್ತ್ರೋಕ್ತ ಪೂಜೆ ಮತ್ತು ಸಂಪ್ರದಾಯಗಳು ನಿರಂತರವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಭಕ್ತರಿಗೆ ಆಶೀರ್ವಚನ ನೀಡಿದರು.

ಶಾಸಕ ಸತೀಶ ಸೈಲ್, ಈ ದೇವಾಲಯದ ಅಭಿವೃದ್ಧಿಗೆ ಈಗಾಗಲೇ ಶಾಸಕರ ನಿಧಿಯಿಂದ ₹16 ಕೋಟಿ ಮಂಜೂರು ಮಾಡಲಾಗಿದೆ. ಹೆಚ್ಚುವರಿಯಾಗಿ ₹5 ಕೋಟಿ ಅನುದಾನ ಪಡೆಯಲು ಸರ್ಕಾರದ ಮಟ್ಟದಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಲಾಗುವುದು ಎಂದು ಭರವಸೆ ನೀಡಿದರು.

ಮಾಜಿ ಶಾಸಕಿ ಹಾಗೂ ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ದೇವಾಲಯ ಜೀರ್ಣೋದ್ಧಾರ ಸಮಿತಿ ಮತ್ತು ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಇದ್ದರು.

ಗುಣವಿಲ್ಲದ ಹಣ ವ್ಯರ್ಥ: ಅರುಣ ಕುಮಾರ

ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

• ಕನ್ನಡಪ್ರಭ ವಾರ್ತೆ ಯಲ್ಲಾಪುರ

ಭಾರತೀಯ ಜೀವನ ಪದ್ಧತಿಯ ತಿರುಳು ತ್ಯಾಗ ಮತ್ತು ಸೇವೆ. ನಮ್ಮ ಜೀವನ ಅದಕ್ಕಾಗಿ ಮುಡಿಪಿರಬೇಕು. ರ್‌ಯಾಂಕ್, ಮಾರ್ಕ್‌ಸ್ ಮತ್ತು ಹಣವೇ ಪ್ರಧಾನವಲ್ಲ, ಭಾರತೀಯ ಜೀವನ ಪದ್ಧತಿಯಲ್ಲಿ ಗುಣವಿಲ್ಲದ ಹಣ ವ್ಯರ್ಥ. ಹಾಗಂತ ಗುಣಸಹಿತ ಹಣ ಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕದ ಪ್ರಚಾರ ವಿಭಾಗದ ಪ್ರಮುಖ ಅರುಣ ಕುಮಾರ ಹೇಳಿದರು.

ವಿಶ್ವದರ್ಶನ ಸೇವಾ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಮತ್ತು ಗೋವರ್ಧನ ಗೋಶಾಲೆ ಕರಡೊಳ್ಳಿಯ ಆಶ್ರಯದಲ್ಲಿ ನಡೆದ ಭಾರತೀಯ ಜೀವನ ಶಿಕ್ಷಣ ಶಿಬಿರದ ಸಂಚಾಲಕ ಶಂಕರ ಭಟ್ಟ ಶಾರೀಮಕ್ಕಿ, ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಗಜಾನನ ನಾಯ್ಕ ಉಪಸ್ಥಿತರಿದ್ದರು.

ಪುಷ್ಪಾ ಮಾಳಕೊಪ್ಪ ಸಂಗಡಿಗರು ಪ್ರಾರ್ಥಿಸಿದರು. ಶಿಬಿರ ಪ್ರಮುಖ ಸಮರ್ಥ ಗಾಂವ್ಕರ್‌ಸ್ವಾಗತಿಸಿದರು. ಸಹಸಂಚಾಲಕ ರಾಮಕೃಷ್ಣ ಕವಡಿಕೆರೆ ನಿರ್ವಹಿಸಿದರು. ವಿಶ್ವದರ್ಶನ ಶಿಕ್ಷಣ ಪಿಯು ವಿಭಾಗದ ಮುಖ್ಯಸ್ಥ ಡಾ. ಡಿ.ಕೆ. ಗಾಂವ್ಕರ್ ವಂದಿಸಿದರು.

ಅತ್ತಿನ್ ಹೆಗಡೆ ಶಿಬಿರದ ಅನುಭವ ಹಂಚಿಕೊಂಡರು. ಶಿಬಿರದಲ್ಲಿ ನಡೆಸಲಾದ ಸ್ಪರ್ಧೆಗಳಲ್ಲಿ ವಿಜೇತರಾದ ಹಾಗೂ ಮಕ್ಕಳಿಗೆ ಪ್ರಮಾಣಪತ್ರ, ಬಹುಮಾನ ವಿತರಿಸಲಾಯಿತು.

ನಗರಸಭೆಯಲ್ಲಿ ಭ್ರಷ್ಟಾಚಾರ: ತನಿಖೆಗೆ ಡಿವೈಎಫ್‌ಐ ಆಗ್ರಹ

- ಘನತ್ಯಾಜ್ಯ ನಿರ್ವಹಣೆಯ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಹಾಗೂ ವೇತನ ಹಣದ ಭ್ರಷ್ಟಾಚಾರ ಮತ್ತು ಸ್ವಚ್ಛತಾ ವಾಹನ ಸೇರಿದಂತೆ ಸಲಕರಣೆಗಳ ಖರೀದಿಯ ಒಟ್ಟು ಪ್ರಕ್ರಿಯೆಯನ್ನು ತನಿಖೆಗೊಳಪಡಿಸುವಂತೆ ಒತ್ತಾಯ

• ಕನ್ನಡಪ್ರಭ ವಾರ್ತೆ ದಾಂಡೇಲಿ

ಇಲ್ಲಿಯ ನಗರಸಭೆಯ ಘನತ್ಯಾಜ್ಯ ನಿರ್ವಹಣೆಯ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಹಾಗೂ ವೇತನ ಹಣದ ಭ್ರಷ್ಟಾಚಾರ ಮತ್ತು ಸ್ವಚ್ಛತಾ ವಾಹನ ಸೇರಿದಂತೆ ಸಲಕರಣೆಗಳ ಖರೀದಿಯ ಒಟ್ಟು ಪ್ರಕ್ರಿಯೆಯನ್ನು ತನಿಖೆಗೊಳಪಡಿಸುವಂತೆ ಒತ್ತಾಯಿಸಿ ಡಿವೈಎಫ್‌ಐ ರಾಜ್ಯ ಸಮಿತಿ ಸದಸ್ಯ ಡಿ. ಸ್ಯಾಮಸನ್ ಶಾಸಕ ಆರ್.ವಿ. ದೇಶಪಾಂಡೆಗೆ ಲಿಖಿತ ಮನವಿ ಸಲ್ಲಿಸಿದ್ದಾರೆ.

2025ರ ಸೆ. 10ರಂದು ಯೋಜನಾ ನಿರ್ದೇಶಕರು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ ಕಾರವಾರ ರವರ ಅಧ್ಯಕ್ಷತೆಯಲ್ಲಿ ನಡೆದ ಸ್ವಚ್ಛ ಭಾರತ ಮಿಷನ್ (ನಗರ) 2.0 ಯೋಜನೆಯ IEC ಚಟುವಟಿಕೆಗಾಗಿ Interpersonal Communication ಗಾಗಿ ಕಮ್ಯೂನಿಟಿ ಮೊಬಿಲೈಜರ್‌ನ್ನು (Community Mobilizer) ಬಂದಿರುವ ಅಭ್ಯರ್ಥಿಗಳ ಅರ್ಜಿಗಳಿಗೆ ಆಯ್ಕೆ ಕುರಿತು ನಗರ ಸ್ಥಳೀಯ ಸಂಸ್ಥೆಗಳಿಂದ ಸ್ವೀಕೃತವಾದ ಪ್ರಸ್ತಾವನೆಗೊಳಿಸಲು 4 ಜನ ಸಿಬ್ಬಂದಿಗಳನ್ನು ನೇಮಕ ಮಾಡುತ್ತಾರೆ.

ದಾಂಡೇಲಿ ನಗರಸಭೆಗೆ ಅನುಮೋದನೆಗೊಂಡಿದ್ದು 9 ಹುದ್ದೆಗಳು ಆದರೆ ಕೇವಲ 4 ಹುದ್ದೆಗಳಿಗೆ ಸಿಬ್ಬಂದಿಗಳನ್ನು ನೇಮಕ ಮಾಡಿರುತ್ತಾರೆ. ಈ ಆಯ್ಕೆಯಾದ ಸಿಬ್ಬಂದಿಗಳನ್ನು ಯಾವ ವಿಷಯಕ್ಕಾಗಿ ಕೆಲಸಕ್ಕೆ ತೆಗೆದುಕೊಂಡಿದ್ದರೂ ಆ ಕೆಲಸಕ್ಕೆ ಇತ್ತೀಚೆಗೆ ಅಂದರೆ ಕಳೆದ ತಿಂಗಳು ಮಾರ್ಚ್ 2026ರಿಂದ ಕೆಲಸ ಮಾಡಿಸುತ್ತಿದ್ದಾರೆ. ಆದರೆ ಅವರಿಗೆ ವೇತನವನ್ನು ನೇಮಕ ಮಾಡಿದ ದಿನಾಂಕ: 10-09-2025ದಿಂದ ಪೂರ್ವನ್ವಯ ವಾಗುವಂತೆ ಸುಳ್ಳು ಬಿಲ್ ಹಾಗೂ ದಾಖಲೆ ಸಿದ್ಧಪಡಿಸಿದ್ದಾರೆ. ಅಲ್ಲದೇ ಬಂದ ವೇತನದ ಒಟ್ಟು ಹಣವನ್ನು ಕೇವಲ 2 ಜನ ಸಿಬ್ಬಂದಿಗಳ ಖಾತೆಗೆ ಜಮಾ ಮಾಡಿದ್ದಾರೆ. ಅಷ್ಟೇ ಅಲ್ಲದೇ ಈ ಇಬ್ಬರು ಸಿಬ್ಬಂದಿಗಳ ಖಾತೆಗೆ ಬಂದ ಹಣದಲ್ಲಿ, ಕೇವಲ ಒಂದು ತಿಂಗಳು ವೇತನವನ್ನು ಮಾತ್ರ ಆ ಸಿಬ್ಬಂದಿಗೆ ಕೊಟ್ಟು ಉಳಿದೆಲ್ಲ ಒಟ್ಟು ವೇತನದ ಹಣವನ್ನು ಅವರಿಂದ ಮರಳಿಪಡೆದುಕೊಂಡಿದ್ದಾರೆಂದು ತಿಳಿದು ಬಂದಿದೆ. ಇದೆಲ್ಲವೂ ಒಂದು ವಾರದಲ್ಲಿ ನಡೆದ ಪ್ರಕ್ರಿಯೆಯಾಗಿದೆ ಆಗಿದೆ ಎಂದು ಸ್ಯಾಮಸನ್ ಆರೋಪಿಸಿದ್ದಾರೆ.

ದಾಂಡೇಲಿ ನಗರಸಭೆಯಲ್ಲಿ ಘನತ್ಯಾಜ್ಯ ನಿರ್ವಹಣೆ, ಆರೋಗ್ಯ ಶಾಖೆಯ ಹೊರಗುತ್ತಿಗೆ ನೌಕರರ ನೇಮಕಾತಿ ಅಧಿಕಾರಿಯೋರ್ವರು ಕಳೆದ ಎರಡುವರೆ ವರ್ಷಗಳಿಂದ ಘನತ್ಯಾಜ್ಯ ಸ್ವಚ್ಛತಾ ನಿರ್ವಹಣಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಅಧಿಕಾರವಧಿಯಲ